ವಿಜಯವಾಣಿ 18-8-24



ಕಾರ್ಮಿಕ ಸ್ನೇಹಿಯಾಗಿ ವಿನ್ಯಾಸ | ಸೈಕಲ್ ಮಾದರಿಯಲ್ಲಿ ಪೆಡಲ್ ತುಳಿಯುವ ವ್ಯವಸ್ಥೆ

# ಖಾದಿ ಚರಕಗಳಿಗೆ ಹೊಸ ಸ್ವರೂಪ

ರಮೇಶ ಜಹಗೀರದಾರ್ ದಾವಣಗೆರೆ

ಸ್ವದೇಶಿ ಬಟ್ಟೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದಶಕಗಳಿಂದ ಕಾರ್ಯ ನಿರ್ವಹಿಸುತ್ತಿರುವ ರಾಜ್ಯದ ಖಾದಿ ಸಂಘ ಸಂಸ್ಥೆಗಳಲ್ಲಿ ಸಾಂಪ್ರದಾಯಿಕವಾಗಿ ಉಪಯೋಗಿಸುತ್ತ ಬಂದಿರುವ ಚರಕಗಳಿಗೆ ಹೊಸ ಸ್ವರೂಪ ನೀಡಲಾಗುತ್ತಿದೆ. ಸೈಕಲ್ ಮಾದರಿಯಲ್ಲಿ ತುಳಿದು (ಪೆಡ್ಲಿಂಗ್) ಉಪಯೋಗಿಸುವ ಕಾರ್ಮಿಕ ಸ್ನೇಹಿ ಚರಕವೊಂದನ್ನು ಅಭಿವೃದ್ಧಿಪಡಿಸಲಾಗಿದೆ.

ರಾಜ್ಯದಲ್ಲಿ 109 ಖಾದಿ ಸಂಘ ಸಂಸ್ಥೆಗಳಿದ್ದು ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸಿವೆ. ನೆಲದ ಮೇಲೆ ಕುಳಿತು ನೂಲುವ ಚರಕಗಳು ಎಲ್ಲೆಡೆ ಇವೆ. ಬದಲಾದ ಸಂದರ್ಭದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧಿಕಾರಿಗಳು ಸಾಂಪ್ರದಾಯಿಕ ಚರಕವನ್ನು ಹೊಸ ರೀತಿಯಲ್ಲಿ ಪರಿಚಯಿಸಲು ಮುಂದಾಗಿದೆ.

ವಿ ವಿ ಶೇ ಷ

ದಾವಣಗೆರೆಯ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಹೊಸ ಮಾದರಿಯ ಚರಕವನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ನೀಡಲಾಗಿತ್ತು. ಆ ವಿದ್ಯಾರ್ಥಿಗಳು 6 ತಿಂಗಳ ಹಿಂದೆ 8 ಸ್ಪಿಂಡಲ್‌ಗಳ ನವೀಕೃತ ಚಕ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಅದನ್ನು ಪ್ರಸ್ತುತ ಇಲ್ಲಿನ ಹರಿಹರ ಚರಖಾ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘದಲ್ಲಿ ಪ್ರಾಯೋಗಿಕವಾಗಿ ಬಳಕೆ ಮಾಡಲಾಗುತ್ತಿದೆ. ಹಳೆಯ ಯಂತ್ರದಲ್ಲಿ ಚರಕವನ್ನು ಕೈಯಿಂದ ತಿರುಗಿಸುವ ವ್ಯವಸ್ಥೆಯಿದೆ. ಕಾರ್ಮಿಕರು ನೆಲದ ಮೇಲೆ ಕುಳಿತು ಅದನ್ನು ಉಪಯೋಗಿಸುತ್ತಾರೆ. ನವೀಕೃತ ಚರಕದ ವಿಶೇಷತೆ ಏನೆಂದರೆ ಕೈಯಲ್ಲಿ ತಿರುಗಿಸುವ ವ್ಯವಸ್ಥೆಯ ಜತೆಗೆ ಕಾಲಿನಿಂದ ಸೈಕಲ್‌ನ ಪೆಡಲ್ ತುಳಿದಂತೆ ಬಳಸಬಹುದಾಗಿದೆ. ಕುಳಿತುಕೊಳ್ಳಲು ಕುರ್ಚಿ, ಚರಕವನ್ನಿಡಲು ಸ್ಟ್ಯಾಂಡ್ ಕೂಡಾ ಇರುವುದರಿಂದ ಕಾರ್ಮಿಕ ಸ್ನೇಹಿಯಾಗಿದೆ.

ಹಳೆಯ ಚರಕದಲ್ಲಿ ಪ್ರತಿ ಕಾರ್ಮಿಕ ದಿನಕ್ಕೆ 25 ರಿಂದ 30 ಲಡಿಗಳಷ್ಟು ನೂಲನ್ನು ಉತ್ಪಾದನೆ ಮಾಡುತ್ತಾರೆ. ಹೊಸ ಚರಕದಲ್ಲಿ 30 ರಿಂದ 35 ಲಡಿ ಉತ್ಪಾದಿಸಬಹುದು. ನೂಲಿನ ಉತ್ಪಾದನೆ ಹೆಚ್ಚಳದ ಜತೆಗೆ ಗುಣಮಟ್ಟವೂ ಉತ್ತಮವಾಗಿರುತ್ತದೆ. ದಾವಣಗೆರೆಯ ಖಾದಿ ಸಂಘದಲ್ಲಿ ನಡೆಯುತ್ತಿರುವ ಪ್ರಯೋಗ ಯಶಸ್ವಿಯಾಗಿದೆ. ಮುಂಬರುವ ದಿನಗಳಲ್ಲಿ ಇದನ್ನು ರಾಜ್ಯದ ಎಲ್ಲ ಖಾದಿ ಸಂಘ ಸಂಸ್ಥೆಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿದೆ. ಬರುವ ಜನವರಿ ತಿಂಗಳಲ್ಲಿ ಬೆಂಗಳೂರಿನಲ್ಲಿ ಖಾದಿ ಉತ್ಪನ್ನಗಳ ರಾಷ್ಟ್ರಮಟ್ಟದ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಿದ್ದು ಅಲ್ಲಿ ನವೀಕೃತ ಚರಕವನ್ನು ಪರಿಚಯಿಸಿ ಎಲ್ಲೆಡೆ ಬಳಕೆಯಾಗುವಂತೆ ಮಾಡುವ ಆಲೋಚನೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯವರಿಗಿದೆ.



ಸಾಂಪ್ರದಾಯಿಕ ಚರಕದಲ್ಲಿ ಕಾರ್ಮಿಕರು ನೆಲದ ಮೇಲೆ ಕುಳಿತು ಚರಕವನ್ನು ಉಪಯೋಗಿಸುತ್ತಿರುವುದು.



### ನವೀಕೃತ ಯಂತ್ರದ ಪ್ರಯೋಜನ

- ಉತ್ಪಾದನೆ ಹಾಗೂ ಗುಣಮಟ್ಟ ಹೆಚ್ಚಳ
- ಕಾರ್ಮಿಕರು ಬಳಕೆ ಮಾಡಲು ಅನುಕೂಲಕರ
- ಆರೋಗ್ಯದ ದೃಷ್ಟಿಯಿಂದಲೂ ಲಾಭ
- ಯುವಕರನ್ನು ಆಕರ್ಷಿಸುವ ಉದ್ದೇಶ



ನವೀಕೃತ ಚರಕವನ್ನು ಬಳಸುವುದರಿಂದ ದೇಹಕ್ಕೆ ವ್ಯಾಯಾಮವಾಗುತ್ತದೆ. ಸೈಕಲ್ ರೀತಿಯಲ್ಲಿ ತುಳಿಯುವುದರಿಂದ ಆಯಾಸವಾಗುವುದಿಲ್ಲ. ಕಾರ್ಮಿಕರಿಗೆ ಇದರಿಂದ ಅನುಕೂಲವಾಗುತ್ತದೆ. ನಮ್ಮ ಸಂಘದಲ್ಲಿ ಇದನ್ನು ಬಳಕೆ ಮಾಡುತ್ತಿದ್ದೇವೆ. ಉತ್ಪಾದನೆ ಹಾಗೂ ಗುಣಮಟ್ಟ ಎರಡರಲ್ಲೂ ಬದಲಾವಣೆ ಕಂಡಿದೆ.

| ಜಿ.ಕೆ. ರಂಗಸ್ವಾಮಿ ಹರಿಹರ ಚರಖಾ ಮತ್ತು ಗ್ರಾಮೋದ್ಯೋಗ ಸಹಕಾರ ಸಂಘದ ಕಾರ್ಯದರ್ಶಿ



ಹಳೆಯ ಚರಕದಲ್ಲಿ ಬದಲಾವಣೆ ಮಾಡಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗಿದೆ. ಇದರಿಂದ ಉತ್ಪಾದನೆ ಮತ್ತು ಗುಣಮಟ್ಟ ಹೆಚ್ಚಳವಾಗುತ್ತದೆ. ಯುವಕರನ್ನು ಈ ಕ್ಷೇತ್ರಕ್ಕೆ ಸೆಳೆಯಲು ಸಹಾಯವಾಗುತ್ತದೆ. ನವೀಕೃತ ಚರಕವನ್ನು ತಾಂತ್ರಿಕ ಪರಿಶೀಲನೆಗೆ ಒಳಪಡಿಸಿ ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲ 109 ಖಾದಿ ಸಂಘ ಸಂಸ್ಥೆಗಳಿಗೆ ವಿಸ್ತರಿಸುವ ಉದ್ದೇಶವಿದೆ.

| ಸಿ. ನವೀನ್ ಕುಮಾರ್ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಡೆಪ್ಯುಟಿ ಸಿಇಒ, ಬೆಂಗಳೂರು

B.I.E.T, LIBRARY